ಜಯಶ್ರೀ ಕಾಸರವಳ್ಳಿ

ಕಲೆ: ಡಿ.ಕೆ. ರಮೇಶ್

# ಅಂಗಳದಲ್ಲುರುಳಿದ ರಂಜೆ ಹೂವಿನ ಸುಗಂಧ ಅರಸುತ್ತಾ...




ತಮ್ಮ ಮನೆತನದ ಬಗ್ಗೆ ಯೋಚಿಸುವಾಗೆಲ್ಲಾ ಶ್ರೀಪಾದನಿಗೆ ವೈಕಂ ಮಹಮದ್ ಬಶೀರರ ಕತೆ, 'ನನ್ನಜ್ಜನಿಗೊಂದು ಆನೆಯಿತ್ತು' ನೆನಪಾಗುತ್ತಿರುತ್ತೆ. ಅವನು ಚಿಕ್ಕವನಿರುವಾಗ, ಕೊಟ್ಟಿಗೆಯಲ್ಲಿ ಎಮ್ಮೆ ಹಾಲು ಕರೆದು ಹಿತ್ತಲ್ಕಡೆ ಹುಲುಸಾಗಿ ಬೆಳೆದ ಕೆಸುವನ್ನು ಕಿತ್ತು ಬಟ್ಟೆ ಒಗೆಯುವ ಕಲ್ಲಿನ ಮೇಲೆ ಹರಡಿ ಎಲೆಗೆ ಅಂಟಿದ ಮಳೆಯ ಮಣ್ಣನ್ನು ಬೋಗುಣಿ ನೀರಲ್ಲದ್ದಿ ತೊಳೆಯುತ್ತಾ ಅವನಮ್ಮ, ಇನ್ನೇನು ಕತ್ತಲು ಆವರಿಸಿಕೊಳ್ಳುತ್ತಿರುವ ಅರೆಗತ್ತಲ ಮುಸ್ಸಂಜೆಯಲ್ಲಿ, 'ಬಾರ್ಕೂರಿನಲಿ ಪತ್ರಡೆ ಕೋಲ ಮಾಡಿ ಮುಗಿತೂಂತಾ ಇತ್ತಾ? ಒಂದ್ ಸಾಧಾರಣ ಊಟುಕೂ ಹೊರಂಗ್ಳದ ಚೌಕಿ ತುಂಬ್ತಿತೂಂದ್ರೇ ಯಾಪಾಟಿ ಬರೂರ್ ಹೋಗೂರ್ ಇತ್ತಿರ್ದ್ರೂ ಕಂಡ್ಯಾ!' ಎಂದು ನೆನಪಿನಂಗಳ ಹರವಿಕೊಂಡು ಭೂತಗಾಲಕ್ಕೆ ಸರಿದು ಹೋಗುತ್ತಿದ್ದದುಂಟು. ಹಾಗೆ ನೋಡಿದರೆ ಅಮ್ಮ ವರ್ತಮಾನದ ಬದುಕಿಗೆ ಗತಕಾಲದ ಕೊಂಡಿ ಬೆರೆಸಿ ಬದುಕುತ್ತಿದ್ದದ್ದೇ ಹೆಚ್ಚು. ಅವಳಿಗೆ ಗತಕ್ಕೆ ಜಾರುವುದಕ್ಕೆ ಹಜಾರಕ್ಕೂ ನಡುಮನೆಗೂ ಇದ್ದಷ್ಟೇ ವ್ಯತ್ಯಾಸ. ಒಂದು ಬಾಗಿಲಾಚೆ, ಈಚೆಯಷ್ಟೇ ಸಲೀಸು. ಅವಳು ಗತಗಾಲದ